# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಎಸ್.ವೈ.ಕುಂಬಾರ್, ವಿಚಾರಣಾಧಿಕಾರಿಗಳು ಹಾಗೂ ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು ಇವರಿಗೆ – ಸಂಭಾವನೆ ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ:-**
1. ಸರ್ಕಾರದ ಆದೇಶ ಸಂ. ಸಿಆಸುಇ 11 ಸೇಇವಿ 2019 ದಿನಾಂಕ: 24.04.2019
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 38 ಇಎನ್ ಕ್ಯೂ 2015, ದಿನಾಂಕ:21.01.2017
3. ವಿಚಾರಣಾಧಿಕಾರಿಯವರ ವರದಿ ದಿನಾಂಕ: 08.06.2020

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರಮ ಸಂಖ್ಯೆ:(1)ರ ದಿನಾಂಕ:24.04.2019ರ ಆದೇಶದ ಕ್ರಮ ಸಂಖ್ಯೆ: (ಅ) ನಲ್ಲಿ ಇಬ್ಬರಿಂದ ಐದು ಆರೋಪಿತ ವ್ಯಕ್ತಿಗಳಿರುವ ಜಂಟಿ ಇಲಾಖಾ ವಿಚಾರಣೆಗಳಿಗೆ ವಿಚಾರಣಾಧಿಕಾರಿಯಾಗಿ ನೇಮಕವಾಗುವ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ವಾಹನ ಭತ್ಯೆಯೂ ಸೇರಿದಂತೆ ಒಟ್ಟು ರೂ. 40,000/-ಗಳ ಸಂಭಾವನೆಯನ್ನು ಪಾವತಿಸಲು ತಿಳಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ:21.01.2017 ರ ಆದೇಶದಲ್ಲಿ ಕುಣಿಗಲ್ ತಾಲ್ಲೂಕು ಮಡಿಕೆಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಮಡಿಕೆ ಕನ್ನಸಂದ್ರ ಗ್ರಾಮದಲ್ಲಿ ಅಂದಾಜು ಮೊತ್ತ ರೂ.2.00/-ಲಕ್ಷ ಮೊತ್ತದ ಬಾಕ್ಸ್ ಚರಂಡಿ ಕಾಮಗಾರಿಯನ್ನು ನಿರ್ಮಾಣ ಮಾಡದಿದ್ದರೂ ರೂ.1.98 ಲಕ್ಷಗಳಿಗೆ ಬಿಲ್ ನ್ನು ತಾಯಾರಿಸಿ, ಸುಳ್ಳು ದಾಖಲೆಗಳನ್ನು ಸಲ್ಲಿಸಿ, ಹಣ ದುರುಪಯೋಗಪಡಿಸಿಕೊಳ್ಳಲು ಪ್ರಯತ್ನಿಸಿರುತ್ತಾರೆ ಎಂಬ ಆರೋಪಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಧಿಕಾರಿ/ನೌಕರರಗಳ ವಿರುದ್ಧ ವಿವರವಾದ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ಶ್ರೀ ಎಸ್.ವೈ. ಕುಂಬಾರ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

1. ಶ್ರೀ. ಎಂ.ವಿಜಯ್ ಗೌಡ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ., ಉಪವಿಭಾಗ, ಕುಣಿಗಲ್.
2. ಶ್ರೀ. ರಾಘವೇಂದ್ರ, ಜಿ. ಸಹಾಯಕ ಇಂಜಿನಿಯರ್, ಪಂ.ರಾ.ಇಂ., ಉಪವಿಭಾಗ, ಕುಣಿಗಲ್.

ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣೆ ಜರುಗಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ (3)ರಂತೆ ದಿನಾಂಕ:08.06.2020 ರಂದು ವಿಚಾರಣಾ ವರದಿ ಸಲ್ಲಿಸಿರುತ್ತಾರೆ. ಆದುದರಿಂದ, ವಿಚಾರಣಾಧಿಕಾರಿಯವರಿಗೆ ನಿಯಮಾನುಸಾರ ಸಂಭಾವನೆ/ಭತ್ಯೆ ಮಜೂರು ಮಾಡಲು ಸರ್ಕಾರವು ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ:-

..2

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 38 ಇಎನ್ ಕ್ಯೂ 2015 ಬೆಂಗಳೂರು,**
**ದಿನಾಂಕ:15.02.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿಶ್ರೀ ಎಸ್.ವೈ.ಕುಂಬಾರ್, ವಿಚಾರಣಾಧಿಕಾರಿಗಳು ಹಾಗೂ ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು ಇವರು ಸರ್ಕಾರದ ಆದೇಶದಂತೆ ಇಲಾಖಾ ವಿಚಾರಣೆ ಜರುಗಿಸಿ ವರದಿ ಸಲ್ಲಿಸಿರುವುದರಿಂದ ಸರ್ಕಾರದ ಆದೇಶ ಸಂ. ಸಿಆಸುಇ 11 ಸೇಇವಿ 2019 ದಿನಾಂಕ:24.04.2019 ರ ಅನುಸಾರ ಸಂಚಿತ ಸಂಭಾವನೆ ರೂ. 40,000/- (ನಲವತ್ತು ಸಾವಿರ ರೂ.ಗಳು ಮಾತ್ರ)ಗಳನ್ನು (ವಾಹನ ಭತ್ಯೆಯೂ ಸೇರಿದಂತೆ) ಮಂಜೂರು ಮಾಡಿದೆ.

ಸದರಿ ಮೊತ್ತವನ್ನು ಪಾವತಿಸಲು ಕೂಡಲೇ ಕ್ರಮವಹಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು ಇವರಿಗೆ ತಿಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶದ ಅನುಸಾರ
ಮತ್ತು ಅವರ ಹೆಸರಿನಲ್ಲಿ
15/2
**(ಕೆ.ನದೀಮ್ ಅಹ್ಮದ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ :**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 &2) / (ಆಡಿಟ್).
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು.
3. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು
4. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು - ಸದರಿ ವಿಚಾರಣಾಧಿಕಾರಿಯವರ ಹೆಸರಿಗೆ ಚೆಕ್‌ನ್ನು ಬರೆದು ಅವರ ವಿಳಾಸಕ್ಕೆ ನೋಂದಣಿ ಅಂಚೆ ಮುಖಾಂತರ ಕಳುಹಿಸುವಂತೆ ಕೋರಿದೆ.
6. ಶ್ರೀ ಎಸ್.ವೈ.ಕುಂಬಾರ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ನಂ.104/1, ಶಿವಗಂಗಾ 1ನೇ ಡಿ ಮುಖ್ಯ ರಸ್ತೆ, ಜಕ್ಕಸಂದ್ರ, ಕೋರಮಂಗಲ 1 ನೇ ಬ್ಲಾಕ್, ಬೆಂಗಳೂರು-560034 (ಮೊ. ನಂ.9900245450)

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಉಪ ಕಾರ್ಯದರ್ಶಿಗಳು, (ಆಡಳಿತ-1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಶಾಖೆ
3. ಶಾಖಾ ರಕ್ಷಾ ಕಡತ / ವೆಬ್ ಸೈಟ್ ನಲ್ಲಿ ಪ್ರಕಟಿಸಲು.